ಓ ಎಸ್ ನಂ. 41/2016

ಪಿ ಡಬ್ಲ್ಯೂ: 1

ದಿನಾಂಕ 04-01-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರಃ ಶ್ರೀ ಕೆ ಎಸ್ ಆರ್ ವಕೀಲರಿಂದಃ

ದಾವಾ ಆಸ್ತಿಯ ಖಾತೆ ಎಲ್ ಸಿ ರವೀಂದ್ರಕುಮಾರ್ ರವರ ಹೆಸರಿಗೆ ಇದೆ ಎಂದು ಪತ್ರ ಮಾಡುವ ಸಮಯದಲ್ಲಿ ಗೊತ್ತಾಗಿರುತ್ತದೆ. ಮಾತುಕತೆಯಾದ ಸಮಯದಲ್ಲಿ ಎಲ್ ಸಿ ರವೀಂದ್ರಕುಮಾರ್ ಮತ್ತು ಮತ್ತು ಅವರ ಮಗ ಇದ್ದರು. ದಿನಾಂಕ 10/07/2013 ರಂದು ಕರಾರು ಆಗಿರುತ್ತದೆ. ಕರಾರು ಆಗುವ ಒಂದು ತಿಂಗಳ ಮೊದಲು ಮಾತುಕತೆಯಾಗಿರುತ್ತದೆ. ನಿಖರವಾದ ದಿನಾಂಕ ಮತ್ತು ದಿನವನ್ನು ಹೇಳಲು ಈಗ ನನಗೆ ನೆನಪಿಲ್ಲ. ಎಲ್ ಸಿ ರವೀಂದ್ರಕುಮಾರ್ ರವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಎಲ್ ಸಿ ರವೀಂದ್ರ ಕುಮಾರ್ ರವರ ಆಸ್ತಿಯನ್ನು ವಿಭಾಗ ಮಾಡಿ ಅವರ ಮಗನಿಗೆ ಕೊಡುತ್ತೇನೆ, ಈಗ ಅವರ ಜತೆ ಕರಾರು ಮಾಡಿಕೊಳ್ಳಿ ಎಂದು ಹೇಳಿದ್ದರಿಂದ ಕರಾರು ಮಾಡಿಕೊಂಡಿರುತ್ತೇನೆ. ಹಣವನ್ನು ರವೀಂದ್ರ ಕುಮಾರ್ ಮತ್ತು 1 ನೇ ಪ್ರತಿವಾದಿ ಇಬ್ಬರಿಗೂ ಕೊಟ್ಟಿರುತ್ತೇನೆ.

ಪತ್ರವಾಗುವ ಕಾಲಕ್ಕೆ ಸಾಕ್ಷಿದಾರರಾಗಿ ತ್ಯಾಗರಾಜು, ಮಂಜುನಾಥ ಮತ್ತು ಶಿವಶಂಕರ್ ರವರು ಇದ್ದರು. ಎಂ ಸಿ ಹಳ್ಳಿಯ ರಮೇಶ್ ಎಂಬುವವರ ಕಡೆಯಿಂದ ಪರಿಚಯವಾದ ದೇವರಾಜು ಎಂಬುವವರು ಮಾತುಕತೆಯಾದ ಸಮಯದಲ್ಲಿ ಸಾಕ್ಷಿದಾರರಾಗಿ

ಇದ್ದರು. ಮಾತುಕತೆಯಾದ ಸಮಯದಲ್ಲಿ ಸಾಕ್ಷಿದಾರರಾಗಿದ್ದ ದೇವರಾಜುರವರ ತಂದೆ ಹೆಸರು ಮತ್ತು ಊರು ಯಾವುದೆಂದು ನನಗೆ ಗೊತ್ತಿಲ್ಲ. ಆದರೆ ಕಡೂರಿನಲ್ಲಿ ನನಗೆ ಸಿಗುತ್ತಿದ್ದರು. ಪತ್ರ ಮಾಡಿಕೊಳ್ಳುವ ಕಾಲಕ್ಕೆ ದೇವರಾಜು ರವರನ್ನು ಸಾಕ್ಷಿದಾರರನ್ನಾಗಿ ಮಾಡಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಆದರೆ ಪತ್ರವಾಗುವ ಕಾಲಕ್ಕೆ ದೇವರಾಜುರವರು ಸ್ಥಳದಲ್ಲಿ ಇರಲಿಲ್ಲ.

35 ಲಕ್ಷ ಕ್ರಯದ ಮಾತುಕತೆ ಬಾಬ್ತು 34 ಲಕ್ಷ ರೂ ನಗದನ್ನು ಮುಂಗಡವಾಗಿ ಕೊಟ್ಟಿರುತ್ತೇನೆ. 34 ಲಕ್ಷ ರೂಗಳನ್ನು ನಾನು ಎಲ್ಲಿಂದ ಮತ್ತು ಹೇಗೆ ಬಂತು ಎಂಬುದರ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನಾವು ನಾಲ್ಕು ಜನ ಸಹೋದರರು ಸೇರಿ ತಲಾ 8 ಲಕ್ಷ ರೂಗಳನ್ನು ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ವಾದಪತ್ರ ಮತ್ತು ನೋಟೀಸಿನಲ್ಲಿ ಹೇಳಿರುವುದಿಲ್ಲ.

ನಾವು ಎಲ್ಲಾ ಸಹೋದರರಿಗೆ ತಲಾ 8 ಲಕ್ಷ ರೂ ಕೊಡಲು ಸಾಮರ್ಥ್ಯ ಇದ್ದು, ಅದರ ಬಗ್ಗೆ ದಾಖಲಾತಿ ಕೊಡಲು ತೊಂದರೆ ಇಲ್ಲ. 20 ಸಾವಿರ ರೂ ಮೇಲ್ಪಟ್ಟ ವ್ಯವಹಾರಗಳನ್ನು ಚೆಕ್ಕಿನ ಮೂಲಕ ಮಾಡಬೇಕು ಎಂದರೆ ನಿಜ. ನನಗೂ 1 ನೇ ಪ್ರತಿವಾದಿ ಮತ್ತು ಅವರ ತಂದೆಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅವರ ಕೆಲವು ಕಾಗದ ಪತ್ರಗಳು ಕಳೆದುಹೋಗಿದ್ದು, ಅದನ್ನು ನಾನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸುಮಾರು ಈಗ 38 ವರ್ಷ ವಯಸ್ಸಾಗಿರುತ್ತದೆ. 1 ನೇ ಪ್ರತಿವಾದಿಗೆ ಈಗ ಎಷ್ಟು ವಯಸ್ಸಾಗಿದೆ ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನನಗೆ ಪರಿಚಯವಷ್ಟೆ, ನನ್ನ ಸಹಪಾಠಿಯಲ್ಲ. 1 ನೇ ಪ್ರತಿವಾದಿ ನನಗೆ ಕರಾರುಪತ್ರವಾಗುವ 1 ತಿಂಗಳುಗಳ ಮೊದಲಿನಿಂತ ಮಾತ್ರ ಪರಿಚಯ. ದಾವಾ ಆಸ್ತಿ ಮೂಲತಃ ಎಲ್ ಸಿ ರವೀಂದ್ರಕುಮಾರ್ ರವರಿಗೆ ಸೇರಿದ್ದು ಎಂದು ಮಾತ್ರ ನನಗೆ ಗೊತ್ತು. ಮೂಲತಃ ಯಾರಿಗೆ ಸೇರಿದ್ದೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಪಹಣಿ ಮತ್ತು ಖಾತೆಯನ್ನು ನೋಡಿರುತ್ತೇನೆ. ಪಹಣಿ ಮತ್ತು ಖಾತೆಯನ್ನು ಹೊರತು ಪಡಿಸಿ ಅಸೆಸ್ಮೆಂಟ್ ಮತ್ತು ಮ್ಯುಟೇಷನ್ ದಾಖಲೆಗಳನ್ನು ನಾನು ನೋಡಿರುತ್ತೇನೆ.

ಅಸೆಸ್ಮೆಂಟ್ ನಂ. 791 ಯಾವಾಗ ಹೊಸ ನಂಬರಾಗಿ ಪರಿವರ್ತನೆಯಾಗಿದೆ ಎಂದು ನನಗೆ ಹೇಳಲು ಸಾದ್ಯವಿಲ್ಲ, ದಾಖಲಾತಿಗಳನ್ನು ನೋಡಿ ಹೇಳಬಲ್ಲೆ. ಅಸೆಸ್ಮೆಂಟ್ ನಂ.791 ರಲ್ಲಿ ಒಟ್ಟು ವಿಸ್ತೀರ್ಣ 272 + 198 / 2 x 280 ಅಡಿಗಳು ಇದೆ. ಹೊಸ ಅಸೆಸ್ಮೆಂಟ್ ನಂ. 1977/1 ಮತ್ತು 1914/1 ಮತ್ತು ಹಳೆಯ ಅಸೆಸ್ಮೆಂಟ್ ನಂ.791 ರ ಎರಡು ಚಕ್ಕುಬಂದಿ ಒಂದೆ ಎಂದು ತೋರಿಸಲು ನಾನು ಕ್ರಯಪತ್ರ ಮತ್ತು 2013 ರ ಅಸೆಸ್ಮೆಂಟನ್ನು ನೋಡಿರುತ್ತೇನೆ. 2013 ರ ಹಿಂದಿನ ಅಸೆಸ್ಮೆಂಟನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಖರೀದಿಸುವಾಗಿನ ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿದಿರುತ್ತಾರೆ.

2013 ರಲ್ಲಿ 1 ನೇ ಪ್ರತಿವಾದಿಯವರ ಆರೋಗ್ಯ ಪರಿಸ್ಥಿತಿ ಚೆನ್ನಾಗಿತ್ತು. 1 ನೇ ಪ್ರತಿವಾದಿಯವರು ಲಾರಿ ವ್ಯವಹಾರ ಮಾಡುತ್ತಿದ್ದು, ಅದಕ್ಕೆ ಸಾಲ ಮಾಡಿದ್ದು ಅದರ ಮರುಪಾವತಿಗಾಗಿ ದಾವಾ ಆಸ್ತಿಯನ್ನು

ಮಾರಾಟ ಮಾಡುತ್ತೇನೆ ಎಂದು ಹೇಳಿರುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಇಂದಿಗೂ ಸಹ ದಾವಾ ಆಸ್ತಿ ಖಾತೆ ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿಯ ತಂದೆ 1ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ಖಾತೆ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. 1ನೇ ಪ್ರತಿವಾದಿಯು ಸಾಲವನ್ನು ಎಲ್ಲೆಲ್ಲಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ವಿಚಾರದ ಬಗ್ಗೆ ವಾದಪತ್ರ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಸಾಕ್ಷಿ ಮುಂದುವರೆದು ಬಾಯಿ ಮಾತಿನಲ್ಲಿ ಆಗಿದ್ದು ಅದನ್ನು ವಾದಪತ್ರದಲ್ಲಿ ಹೇಳಿಲ್ಲ ಎಂದು ನುಡಿದಿರುತ್ತಾರೆ. 1ನೇ ಪ್ರತಿವಾದಿಗೆ ಎಷ್ಟು ಲಾರಿಗಳು ಇದ್ದವೆಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು ಅವರ ತಂದೆ ನಿಖರವಾಗಿ ಇಷ್ಟೇ ಸಾಲ ಇದೆ ಎಂದು ನನಗೆ ಹೇಳಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.